**SC No.274/2024**
**P.W. 4**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 274/2024** **P.W. 4**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **22.05.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.

ವಕೀಲರಿಂದ :

1. ನನ್ನ ಮೇಲೆ 3 ಪ್ರಕರಣಗಳು ಇದೆ. ಮೊದಲನೆಯದು ಕೊಲೆ ಕೇಸ್. ಎರಡ ಮತ್ತು ಮೂರನೇ ಪ್ರಕರಣಗಳು ಡಕಾಯಿತಿ ಪ್ರಯತ್ನದ ಪ್ರಕರಣಗಳು. ನನ್ನ ಮೇಲೆ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್ ಇದೆ. ನಮ್ಮ ಮನೆ ಇರುವುದು ಗಿರಿಗೌಡನದೊಡ್ಡಿ. ನಮ್ಮ ಮನೆ ಕಗ್ಗಲಿಪುರ ಠಾಣಾ ವ್ಯಾಪ್ತಿಗೆ ಬರುತ್ತದೆ. ನಾನು ವ್ಯವಸಾಯ ಮಾಡುತ್ತೇನೆ. ಮೊದಲು ಕೂಡ ವ್ಯವಸಾಯ ಮಾಡುತ್ತೇನೆ. ಈಗ ಒಂದು ವರ್ಷದಿಂದ ಟ್ರಾಕ್ಟರ್ ಚಾಲನೆ ಮಾಡುತ್ತೇನೆ. ನಾನು ದಿನಕ್ಕೆ 8 ಗಂಟೆಗಳ ಕಾಲ ಟ್ರಾಕ್ಟರ್ ಚಾಲನೆ ಮಾಡುತ್ತೇನೆ. ಟ್ರಾಕ್ಟರ್ ಚಾಲನೆ ಮಾಡಿಸುವುದು ಕಷ್ಟ ಕಾರನ್ನು ಸುಲಭವಾಗಿ ಚಾಲನೆ ಮಾಡಬಹುದು. ಚುನಾವಣೆ ಸಮಯದಲ್ಲಿ ರೌಡಿ ಶೀಟರ್ ಗಳನ್ನು ಠಾಣೆಗೆ ಕರೆಸುತ್ತಾರೆ ಎಂದರೆ ಸರಿ. ಚುನಾವಣೆ ಸಮಯದಲ್ಲಿ ಗುಂಪು ಕಟ್ಟಿಕೊಂಡು ಓಡಾಡಬಾರದು ಮತ್ತು ಯಾವುದೇ ಅಪರಾದ ಮಾಡಬಾರದು ಎಂದು ಠಾಣೆಗೆ ಕರೆಸುತ್ತಾರೆ ಎಂದರೆ ಸರಿ. ರೌಡಿ ಶೀಟರ್ ನಿಂದ ತೆಗೆಯುವಂತೆ ನ್ಯಾಯಾಲಯದಲ್ಲಿ ಪ್ರಕರಣದ ದಾಖಲು ಮಾಡಿಲ್ಲ.

2. ನಮ್ಮ ಕುಟುಂಬದಲ್ಲಿ ಯಾರು ರಾಜಕೀಯ ಮಾಡುತ್ತಿಲ್ಲ. ಗುಂಡಪ್ಪ ಮತ್ತು ಪಟ್ಲಮ್ಮ ರವರಿಗೆ ಮಾತ್ರ ಚುನಾವಣೆ ಗೆ ಸಹಾಯ ಮಾಡತ್ತೇನೆ. ನಾನು MP ಮತ್ತು MLA ಸಮಯದಲ್ಲಿ ಜೆ.ಡಿ.ಎಸ್. ಪಕ್ಷಕ್ಕೆ ಬೆಂಬಲಿಸುತ್ತೇನೆ. 4 ನೇ ಆರೋಪಿ ಗ್ರಾಮ ಪಂಚಾಯ್ತಿ ಸದಸ್ಯರು ಹಾಗೂ ಅವರು BJP ಪಕ್ಷಕ್ಕೆ ಬೆಂಬಲ ನೀಡುತ್ತಾರೆ. ಸಾಮಾನ್ಯವಾಗಿ ಚುನಾವಣೆ ಕಾಲಕ್ಕೆ BJP, Congress, JDS ಮತ್ತು ಇತರೆ ಪಕ್ಷದ ಅಭ್ಯರ್ಥಿಗಳ ನಡುವೆ ವೈಶ್ಯಮ ಇರುತ್ತದೆ ಎಂದರೆ ಸರಿ. ಕಳೆದ ಬಾರಿ ನಾನು ನ್ಯಾಯಾಲಯಕ್ಕೆ

ಸುಮಾರು 7 – 8 ಎರಡು ಕಾರಿನಲ್ಲಿ ಬಂದಿದ್ದೆವು. ಈ ದಿನ ನಾವು ನ್ಯಾಯಾಲಯಕ್ಕೆ 4 ಜನ ಬಂದಿದ್ದೆವು. ನನ್ನ ಭಾವ ಮತ್ತು ಅವರ ಸ್ನೇಹಿತ, ನಾನು ಮತ್ತು ಅವರ ಚಾಲಕ ಬಂದಿದ್ದೇವೆ.

3. ನಮ್ಮ ಊರಿನಲ್ಲಿ ಸಾಮಾನ್ಯವಾಗಿ Congress ಮತ್ತು BJP ನಡುವೆ ಸಂಘರ್ಷ ಇರುತ್ತದೆ ಆದರೆ ಘಟನೆ ನಡೆದ ಸಮಯದಲ್ಲಿ BJP ಗೆದ್ದಿತ್ತು. ಪಟ್ಲಮ್ಮ ಹಾಗೂ 4 ನೇ ಆರೋಪಿಗೂ ಯಾವುದೇ ವೈಶ್ಯಮ ಇರಲಿಲ್ಲ. 4 ನೇ ಆರೋಪಿ ವಿರುದ್ಧ ಪಟ್ಲಮ್ಮ ಸೋತರು. 4 ನೇ ಆರೋಪಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನಾವು ಗೌಡ ಜಾತಿಯವರು ಮತ್ತು ಪಟ್ಲಮ್ಮ ರವರು ವಡ್ಡ ಜಾತಿಯವರು. ಆರೋಪಿತರು ವಡ್ಡ ಜಾತಿಯವರು. ನಮ್ಮ ಗ್ರಾಮದಲ್ಲಿ ಜಾತೀಯತೆ ಇದೆ ಎಂದರೆ ಸರಿ ಅಲ್ಲ. ನಾವು ಪಂಚಾಯ್ತಿ ಕೆಲಸಕ್ಕೆ 4 ನೇ ಆರೋಪಿಯ ಮುಂದೆ ಹೋಗಬೇಕು ಎಂದರೆ ಸರಿ, ಆದರೆ ನಾನು ಹೋಗಿಲ್ಲ. ವಡ್ಡ ಜಾತಿಯವರು ಗ್ರಾಮ ಪಂಚಾಯ್ತಿ ಅಧ್ಯಕ್ಷರು ಆಗಿರುವುದೇ ನಮ್ಮ ಈ ದೂರಿಗೆ ಕಾರಣ ಎಂದರೆ ಸರಿ ಅಲ್ಲ. ನಾನು ಆರೋಪಿತರ ಕುಟುಂಬದವರ ಬಗ್ಗೆ ಮಾತನಾಡಿರುವುದು ಎಲ್ಲಾ ಕಡೆ ವೈರಲ್ ಆಗಿದೆ ಎಂದರೆ ಬೇರೆ ಯಾರೋ ಮಾತನಾಡಿರುವುದನ್ನು ನಾನು ಮಾತನಾಡಿದ್ದು ಎಂದು ತಪ್ಪಾಗಿ ತಿಳಿದುಕೊಂಡಿದ್ದಾರೆ. ವಡ್ಡರು ಅಧಿಕಾರದಲ್ಲಿ ಇದ್ದಾರೆ ಅವರನ್ನು ಯಾವ ಕಾರಣಕ್ಕೂ ಬಿಡಬಾರದು ಆ ಸ್ಥಾನದಿಂದ ಬಿಡಿಸಬೇಕು ಎಂದು ನಾನು ಯಾವಾಗಲೂ ಹೊಂಚು ಹಾಕುತ್ತಿದ್ದವು ಎಂದರೆ ಸರಿ ಅಲ್ಲ. ಆ ಕಾರಣದಿಂದ ನಾವು ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿ ಅಲ್ಲ.

4. ನಮಗೂ ಹಾಗೂ ಆರೋಪಿತರಿಗೂ ಯಾವುದೇ ಗಲಾಟೆಯಾಗಿಲ್ಲ ಮತ್ತು ಯಾವುದೇ ರಾಜಕೀಯ ವೈಶಮ್ಯ ಇಲ್ಲ. ನಾನು ಅವರ ಮನೆಯಲ್ಲಿ ಹೋಗಿ ಊಟ ಮಾಡಿದ್ದೇನೆ. ಈ ದೂರನ್ನು ನನ್ನ ತಂದೆ ನೀಡಿದ್ದಾರೆ ಎಂದರೆ ಸರಿ. ನಮ್ಮ ತಂದೆಗೆ ಈ ದೂರನ್ನು ನೀಡಲು ನಾನೇ ಹೇಳಿಕೊಟ್ಟು ಕಥೆ ಹೆಣೆದಿದ್ದೇನೆ ಎಂದರೆ ಸರಿ ಅಲ್ಲ. ದೂರನ್ನು ಯಾರು ಕೊಟ್ಟರು ಮತ್ತು ಯಾರು ಬರೆದರು ಎಂದು ಗೊತ್ತಿಲ್ಲ. ದಯಾನಂದ ಆಸ್ಪತ್ರೆ ನನಗೆ ಪರಿಚಿತ ಆಸ್ಪತ್ರೆ ಎಂದರೆ ಸರಿ ಅಲ್ಲ. ಅಲ್ಲಿ ಕೆಲಸ ಮಾಡುವ ವೈದ್ಯರು ಮತ್ತು ಸಿಬ್ಬಂದಿಗಳು ನನಗೆ ಪರಿಚಿತಿ ಇರುವುದರಿಂದ ನಾನು ಹೋಗಿದ್ದೆ ಎಂದರೆ ಸರಿ ಅಲ್ಲ. ಘಟನೆ ನಡೆದಾಗ ನಮ್ಮ ಹಳ್ಳಿಯ ಸುಮಾರು 70 – 80 ಜನ ನಿಂತಿದ್ದರು ಮತ್ತು ಪೊಲೀಸ್ ನವರು ಸಹ ಇದ್ದರು. ಒಬ್ಬ ಪೊಲೀಸರು ಮಾತ್ರ ಬಂದಿದ್ದರು. ಘಟನೆ ನಡೆದಾಗ ರಾತ್ರಿ 10.30 ಗಂಟೆಯಾಗಿತ್ತು. ಕೇಸರಿ ಬಣ್ಣದ ಶರ್ಟ ಮತ್ತು ಚಡ್ಡಿ ಧರಿಸಿದ್ದೆ. ಪ್ಯಾಂಟ್ ಯಾವುದು ಎಂದು ನೆನಪಿಲ್ಲ.

5. ಘಟನಾ ಸ್ಥಳಕ್ಕೂ ಮತ್ತು ನಮ್ಮ ಮನೆಗೂ 300 ಮೀಟರ್ ಅಂತರ. ನಾನು ಆಗ ಸುದರ್ಶನ್ ರವರನ್ನು ಬಿಡಲು ಹೋಗಿದ್ದೆ. ಸುದರ್ಶನ್ ರವರು ನನ್ನನ್ನು ಕರೆದುಕೊಂಡು ಹೋಗಿದ್ದರು. ಅವರ ಜೊತೆಗೆ ನಾನು ಬೈಕ್ ನಲ್ಲಿ ಹೋಗಿದ್ದೆ. ಬೈಕ್ ಅನ್ನು ನಾನು ಚಾಲನೆ ಮಾಡುತ್ತಿದ್ದೆ. ನಾನು ಈಗ ಮದ್ಯಪಾನ ಮಾಡುತ್ತಿಲ್ಲ. ಸುಮಾರು ಒಂದುವರೆ ವರ್ಷಗಳ ಹಿಂದೆ ಈ ಘಟನೆ ನಡೆದ ನಂತರ ಬಿಟ್ಟಿದ್ದೇನೆ. ನಾನು ಬೆಳಗ್ಗೆಯಿಂದ ತೋಟದಲ್ಲಿ ಕೆಲಸ ಮಾಡಿ ಸಂಜೆ ಮದ್ಯಪಾನ ಮಾಡುತ್ತಿದ್ದೆ. ಘಟನೆ ನಡೆದಿದೆ ಎಂದು ಹೇಳುವ ದಿನ ನಾನು ಮದ್ಯಪಾನ ಮಾಡಿ ಒಂದು ಕಡೆ ಬಿದ್ದಿದ್ದೆ ಎಂದರ ಸರಿ ಅಲ್ಲ. ಹಲವಾರು ಬಾರಿ ನಾನು ಕುಡಿದು ಬಿದ್ದಿದ್ದಾಗ ನಮ್ಮ ಊರಿನವರು ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ಸರಿ ಅಲ್ಲ. ಸಾಮಾನ್ಯವಾಗಿ ಕುಡಿದರೆ ತಾನು ಏನು ಮಾಡುತ್ತೇನೆ ಎಂದು ಗೊತ್ತಾಗುವುದಿಲ್ಲ ಎಂದರೆ ಹೆಚ್ಚು ಮದ್ಯಪಾನ ಮಾಡಿದರೆ ಗೊತ್ತಾಗುವುದಿಲ್ಲ ಆದರೆ ಕಡಿಮೆ ಮಾಡಿದರೆ ಗೊತ್ತಾಗುತ್ತದೆ. ಘಟನೆ ದಿನ ನಾನು ಕೆಲಸ ಮಾಡಿದೆ. ಕೆಲಸ ಮಾಡಿದ ನೋವು ತಿಳಿಯಬಾರದು ಎಂದು ಮದ್ಯಪಾನ ಮಾಡಿದ್ದೆ ಎಂದೆರ ಸರಿ.

6. ನಾನು ಸುದರ್ಶನ್ ರವರನ್ನು ಕರೆದುಕೊಂಡು ಹೋಗಿಲ್ಲ, ಘಟನೆ ನಡೆದಿಲ್ಲ ಎಂದರೆ ಸರಿ ಅಲ್ಲ. ನಾನು ಕುಡಿದು ಗಾಡಿಯಲ್ಲಿ ಬಿದ್ದು ಈ ರೀತಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಮಗೂ ಹಾಗೂ ಆರೋಪಿತರಿಗೂ ರಾಜಕೀಯ ವೈಶಮ್ಯ ಇದ್ದರಿಂದ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿ ಅಲ್ಲ. ಘಟನೆ ನಡೆದಿದೆ ಎಂದು ಹೇಳುವ ದಿನ ಆರೋಪಿತರು ಯಾವ ಯಾವ ಬಟ್ಟೆ ಧರಿಸಿದ್ದರು ಎಂದು ಗೊತ್ತಿಲ್ಲ. 7 ಜನ ಆರೋಪಿತರ ಪೈಕಿ ಒಬ್ಬರು ಯಾವ ಬಟ್ಟೆ ಧರಿಸಿದ್ದರು ಎಂದು ಹೇಳಲು ಆಗುವುದಿಲ್ಲ. ಘಟನೆ ಸಮಯದಲ್ಲಿ ಕತ್ತಲು ಇತ್ತು ಎಂದರೆ ಮಬ್ಬುಕತ್ತಲು ಇತ್ತು ಮತ್ತು ಯಾವ ಬಟ್ಟೆ ಹಾಕಿದ್ದರು ಎಂದು ಕಾಣಿಸುತ್ತಿರಲಿಲ್ಲ. ಘಟನೆ ನಡೆದ ಸ್ಥಳದಿಂದ ಆರೋಪಿತರ ಮನೆ ಸುಮಾರು 50 ಮೀಟರ್ ದೂರಲ್ಲಿ ಇದೆ. ಆರೋಪಿತರು ಘಟನಾ ಸ್ಥಳದಲ್ಲಿ ಇರಲಿಲ್ಲ ಮತ್ತು ಅವರ ಮನೆಯಲ್ಲಿ ಇದ್ದರು ಎಂದರೆ ಸರಿ ಅಲ್ಲ. ಈ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ.

7. ಆಸ್ಪತ್ರೆಯಲ್ಲಿ ಪೊಲೀಸರಿಗೆ ಹೇಳಿಕೆ ನೀಡಿದೆ. ಯಾವ ಠಾಣೆಯವರು ಎಂದು ಗೊತ್ತಿಲ್ಲ. ಒಬ್ಬ ಪೇದೆ ಮತ್ತು ನಾನು ಇದ್ದೆ. ಹೇಳಿಕೆಯನ್ನು ಓದಿದ್ದೇನೆ. ಹೇಳಿಕೆ ಕೊಟ್ಟಾಗ ಬೆಳಗ್ಗೆ 9.00

ಗಂಟೆಯಾಗಿತ್ತು. ಪೊಲೀಸರು ಸಮವಸ್ತ್ರದಲ್ಲಿ ಬಂದಿದ್ದರು. ನಾನು BA ಪದವಿಧರ. ಒಟ್ಟು ಎರಡು ಪುಟಗಳ ಹೇಳಿಕೆ ಇದ್ದು ಎರಡು ಪುಟಗಳಿಗೂ ಸಹಿ ಮಾಡಿದ್ದೇನೆ. ಹೇಳಿಕೆಯ ಮೊದಲ ಪುಟದಲ್ಲಿ ಸಹಿ ಇಲ್ಲ ಎಂದರೆ ಸರಿ. ನಾನು ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪೊಲೀಸರಿಗೆ ನೀಡಿಲ್ಲ ಹಾಗೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಹಳ್ಳಿಯ ರಸ್ತೆಯಲ್ಲಿ ಸಾಮಾನ್ಯವಾಗಿ ಮು.ಮಾ. ಗಳ ವಸ್ತುಗಳು ಸಿಗುತ್ತವೆ ಎಂದರೆ ಸರಿ. ಆರೋಪಿತರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ಇಲ್ಲ ಎಂದರೆ ಸರಿ. 4 ನೇ ಆರೋಪಿ ಗಂಡ 1 ನೇ ಆರೋಪಿ ಸರ್ಕಾರಿ ನೌಕರ ಎಂದರೆ ಸರಿ. 1 ನೇ ಆರೋಪಿ ನಮ್ಮ ಊರಿನ ಸುತ್ತ ಮುತ್ತ ತೇರಿಗೆ ವಸೂಲಿ ಮಾಡುತ್ತಾರೆ ಎಂದರೆ ಸರಿ. ನಾನು 1 ನೇ ಆರೋಪಿಗೆ ಹಲವಾರು ಬಾರಿ ಬುದ್ದಿ ಹೇಳಿದ್ದು ಆ ಕಾರಣದಿಂದ ಈ ಕೇಸು ಹಾಕಿದ್ದೇನೆ ಎಂದರೆ ಸರಿ ಅಲ್ಲ.

8. ಘಟನೆ ಸಮಯದಲ್ಲಿ ನನ್ನ ಬೈಕ್ ಅನ್ನು ಯಾರು ನಿಲ್ಲಿಸಲಿಲ್ಲ. ನಾನು ಸುದರ್ಶನ್ ಅನ್ನು ಬಿಟ್ಟು ಗಾಡಿ ತಿರುಗಿಸಿಕೊಳ್ಳುತ್ತಿದ್ದಾಗ ಘಟನೆಯಾಯಿತು. ಮಹೇಶ್ ನನ್ನ ಚಿಕ್ಕಪ್ಪನ ಮಗ. ಸುರೇಶ್ ನಮ್ಮ ಊರಿನವರು. ಬ್ಯಾಟರಾಜು ಪಕ್ಕದ ಮನೆಯವರು. ಬ್ಯಾಟರಾಜು ನನಗೆ ಪರಿಚಯ. ಈ ಪ್ರಕರಣದ 3 ಮತ್ತು 5 ನೇ ಆರೋಪಿತರು ನನಗೆ ಪರಿಚಯ ಇಲ್ಲ. ಆರೋಪಿತರು ನನ್ನ ಮೇಲೆ ಕಲ್ಲು ಮತ್ತು ಪೈಪ್ ನಿಂದ ಹಲ್ಲೆ ಮಾಡಿಲ್ಲ ಮತ್ತು ಈ ಕೇಸಿಗಾಗಿ ಸೃಷ್ಟಿಸಿದ್ದು ಎಂದರೆ ಸರಿ ಅಲ್ಲ. ನಾನು ನಮ್ಮ ಊರಿನಲ್ಲಿ ಫೈನಾನ್ಸ ಮಾಡಿಕೊಂಡು ರೌಡಿಸಂ ಮಾಡಿಕೊಂಡು ಜನರನ್ನು ಹೆದರಿಸುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಯಾರು ಹೊಡೆಯಲು ಪ್ರಯತ್ನ ಮಾಡುವುದಿಲ್ಲ ಎಂದರೆ ಸರಿ ಅಲ್ಲ. ನಾನು ಪಧವಿದರನಾಗಿದ್ದರೂ ಸಹಫೈನಾನ್ಸ ಮಾಡಿಕೊಂಡು ರೌಡಿಸಂ ಮಾಡಿಕೊಂಡು ಕೆಲಸಕ್ಕೆ ಹೋಗದೇ ಇದ್ದೇನೆ ಎಂದರೆ ಸರಿ ಅಲ್ಲ. ನಾನು ಎಲ್ಲೇ ಹೋದರೂ ಹುಡುಗರನ್ನು ಕರೆದುಕೊಂಡು ಹೋಗುತ್ತೇನೆ ಎಂದೆರ ಸರಿ ಅಲ್ಲ, ನ್ಯಾಯಾಲಯಕ್ಕೆ ಮಾತ್ರ ಕರೆದುಕೊಂಡು ಬರುತ್ತೇನೆ.

9. ನನಗೆ ಗಾಂಜ ಹೊಡೆಯುವ ಅಭ್ಯಾಸ ಇದೆ ಎಂದರೆ ಸರಿ ಅಲ್ಲ. ನನಗೆ ಆರೋಪಿತರ ವಿರುದ್ಧ ರಾಜಕೀಯು ವೈಶಮ್ಯ ಇರುವುದರಿಂದ ಆರೋಪಿತರ ಪೂರ್ತಿ ಕುಟುಂಬದ ಮೇಲೆ ಸುಳ್ಳು ಪ್ರಕರಣದ ದಾಖಲು ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಾನು ರೌಡಿ ಶೀಟರ್ ಗಳನ್ನು ಮತ್ತು ಕೊಲೆ ಆರೋಪಿತರನ್ನು ಊರಿಗೆ ಕರೆಯಿಸಿ ಪಾರ್ಟಿ ಮಾಡಿಕೊಂಡು ಜನರನ್ನು ಹೆದರಿಸುತ್ತೇನೆ ಎಂದರೆ ಸರಿ ಅಲ್ಲ. ನನ್ನ ವಿರುದ್ಧ ಕೊಲೆ ಪ್ರಕರಣ ಈಗಲೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಆರೋಪಿತರು ಮೃದು

ಸ್ವಭಾವದವರು ಎಂದರೆ ಸರಿ. ನಾನು ಮೊದಲು ಅವರ ಮನೆಗೆ ಹೋಗಿ ಬರುತ್ತಿದ್ದಾಗ ನನ್ನ ಜೊತೆಗೆ ಒಳ್ಳೆ ಭಾಂದವ್ಯದಿಂದ ಇರುತ್ತಿದ್ದರು ಎಂದರೆ ಸರಿ. ರಾಜಕೀಯ ವೈಶಮ್ಯದಿಂದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.